(ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

(ಅ) (1) ಒಟ್ಟು 33 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು.
(2) ಒಟ್ಟು 171 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು.
(ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ).

(ಆ) ಹೌದು.

(ಇ) ಈ ವರ್ಷದಲ್ಲಿ ಹಣಕಾಸಿನ ಮತ್ತು ಶಿಕ್ಷಕರ ಕೊರತೆಯಿಂದಾಗಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆ ತೆರೆಯಲು ಸಾಧ್ಯವಿಲ್ಲದಾಗಿದೆ.

ಜಿಲ್ಲೆಯಲ್ಲಿ ಇರುವ ಕೈಗಾರಿಕಾ ತರಬೇತಿ ಸಂಸ್ಥೆಗಳ ವಿವರಗಳು :

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸರ್ಕಾರಿ	ಖಾಸಗಿ	ಒಟ್ಟು
1.	ಬೆಂಗಳೂರು	4	28	32
2.	ಬಳ್ಳಾರಿ	2	7	9
3.	ಬೆಳಗಾಂ	2	7	9
4.	ಬೀದರ್	1	5	6
5.	ಬಿಜಾಪುರ	1	20	21
6.	ಚಿತ್ರದುರ್ಗ ...	1	8	9
7.	ಚಿಕ್ಕಮಗಳೂರು	1	2	3
8.	ದಕ್ಷಿಣ ಕನ್ನಡ ...	1	10	11
9.	ಧಾರವಾಡ	1	25	26
10.	ಗುಲ್ಬರ್ಗಾ	2	11	13
11.	ಹಾಸನ	2	2	4
12.	ಕೊಡಗು	2	....	2
13.	ಕೋಲಾರ	2	13	15
14.	ಮಂಡ್ಯ	2	4	6
15.	ಮೈಸೂರು	1	7	8
16.	ರಾಯಚೂರು	1	3	4
17.	ಶಿವಮೊಗ್ಗ	2	5	7
18.	ತುಮಕೂರು	2	13	15
19.	ಉತ್ತರ ಕನ್ನಡ	3	1	4
	ಒಟ್ಟು ...	33	171	204

ಶ್ರೀ ಜ್ಞಾನದೇವ ದೊಡ್ಡಮೇಟಿ.—ಈಗ ಕೈಗಾರಿಕಾ ತರಬೇತಿ ಸಂಸ್ಥೆಗಳು ರಾಜ್ಯದಲ್ಲಿ ಏನು ಇವೆ ಅವುಗಳ ಕಾರ್ಯವಿಧಾನಗಳ ಬಗ್ಗೆ ಸರ್ಕಾರಕ್ಕೆ ಏನಾದರೂ ತೃಪ್ತಿ ಬಂದಿದೆಯೇ ?

ಶ್ರೀ ಡಿ. ಮಂಜುನಾಥ್.—ಈಗ ರಾಜ್ಯದಲ್ಲಿ ಒಟ್ಟು 33 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಇವೆ. ಅವು ಚೆನ್ನಾಗಿ ನಡೆಯುತ್ತಾ ಇವೆ. ಕಳೆದ ವರ್ಷದಲ್ಲಿ ಖಾಸಗೀಯವರು ಈ ಕೈಗಾರಿಕಾ ತರಬೇತಿಯ ಸಂಸ್ಥೆಯನ್ನು ತೆರೆಯುವುದಕ್ಕೆ ಏನು ಪರವಾನಗಿ ಕೊಟ್ಟಿದ್ದಾರೆ. ಅವುಗಳಲ್ಲಿ ಯಾವುದು ಚೆನ್ನಾಗಿ ನಡೆಯುತ್ತಾ ಇಲ್ಲ ಅಲ್ಲಿಗೆ ಜಾಯಿಂಟ್ ಡೈರಕ್ಟರ್‌ರವರನ್ನು ಕಳುಹಿಸಿ ಅದನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ : ಹರಪನಹಳಿ ತಾಲ್ಲೂಕಿನಲ್ಲಿ ಜನತಾ ಗೃಹಗಳ ನಿರ್ಮಾಣ

ಪ್ರ. ಸಂಖ್ಯೆ 58 (94) **ಶ್ರೀ ಬಿ. ಹೆಚ್. ಯಂಕಾನಾಯ್ಕ** (ಹರಪನಹಳ್ಳಿ).—ಈ ಕೆಳಿಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) 1983-84ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಜನತಾ ಗೃಹ ಗಳನ್ನು ನಿರ್ಮಿಸಲಾಗಿದೆ ;

ಆ) ಅದರಲ್ಲಿ ಹರಿಜನ ಗಿರಿಜನ ಮತ್ತು ಇತರ ಹಿಂದುಳಿದವರಿಗೆ ನೀಡಿದ ಗೃಹಗಳ ಸಂಖ್ಯೆ ಎಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ರಾಜ್ಯ ವಸತಿ ಮಂತ್ರಿಗಳು).—

ಅ) 257 ಮನೆಗಳು.

ಆ) 115 ಮನೆಗಳನ್ನು ಹರಿಜನ ಗಿರಿಜನರಿಗೆ ಮಂಜೂರು ಮಾಡಲಾಗಿದೆ. ಉಳಿದ ಮನೆಗಳನ್ನು ಇತರ ಹಿಂದುಳಿದ ವರ್ಗದವರಿಗೆ ಮಂಜೂರು ಮಾಡಲಾಗಿದೆ.

ಶ್ರೀ ಬಿ. ಹೆಚ್. ಯಂಕಾನಾಯ್ಕ.—ಹರಿಜನ ಗಿರಿಜನರಿಗೆ ಮಂಜೂರು ಮಾಡಿರುವ ಮನೆಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಎಷ್ಟು ಮನೆಗಳು ಬಿದ್ದಿವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರಿಯಾಗಿ ಕೇಳಿಸುತ್ತಿಲ್ಲ.

ಶ್ರೀ ಯು. ಭೂಪತಿ.—ನೀವು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಎಷ್ಟು ಮನೆಗಳು ಬಿದ್ದಿವೆ ಎಷ್ಟು ಮನೆಗಳು ಸರಿಯಾಗಿವೆ, ಸರಿಯಾಗಿರುವ ಮನೆಗಳ ಲೆಕ್ಕ ಮಾತ್ರ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಬಿದ್ದು ಹೋಗಿರುವು ದನ್ನು ನನ್ನ ಗಮನಕ್ಕೆ ತಂದರೆ ರಿಪೇರಿ ಮಾಡಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಯಂಕಾನಾಯ್ಕ.—ಮೂರು ತಿಂಗಳಲ್ಲಿ ಎಷ್ಟು ಮನೆಗಳು ಬಿದ್ದು ಹೋಗಿವೆ ; ನಾಶವಾಗಿವೆ ? ಇದಕ್ಕೆ ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳಾದ ಜೆ.ಇ. ಯಾಗಲಿ, ಅಥವಾ ಇತರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿರುವುದನ್ನು ವಿಚಾರಿಸುತ್ತೇನೆ ಸ್ವಾಮಿ.

ವಿಷಯ : ನಾರಾಯಣ ಪೈ ವೇತನ ಆಯೋಗ ಹಾಗೂ ಸರಾಸರಿ ವೇತನ ಆಯೋಗ

ಪ್ರ. ಸಂಖ್ಯೆ 59 (123) **ಶ್ರೀ ಕೆ. ವಸಂತ ಬಂಗೇರ** (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ಸಾರಿಗೆ ಮತ್ತು ವಸತಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ನಾರಾಯಣ ಪೈ, ಪೇ ಕಮೀಷನ್ ಮತ್ತು 1976ರ ಅಫಿಷಿಯಲ್ ಕಮಿಟಿ ವರದಿಯನ್ನು ಜಾರಿಗೆ ತರದೇ ಇರಲು ಕಾರಣಗಳೇನು ಹಾಗೂ ಸದರಿ ವರದಿಯ ಮೇರೆಗೆ 1976ರಲ್ಲಿ ಕಾನೂನು ಪದ ವೀಧರರಾಗಿದ್ದು ವಕೀಲ ವೃತ್ತಿಯಲ್ಲಿದ್ದವರನ್ನು ಮೋಟಾರು ವಾಹನ ಇಲಾಖೆಯಲ್ಲಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರಾಗಿ ನೇಮಿಸಿ ಅವರನ್ನು ಸಾರಿಗೆ ಅಧಿಕಾರಿಯವರ (ಆರ್‌ಟಿಓ) ಸಂಬಳ ಮತ್ತು ಗ್ರೇಡ್ ನಲ್ಲಿ ಇರಬೇಕೆಂದು ಹೇಳಿದ್ದರೂ ಅಂತಹ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರನ್ನು ಮೋಟಾರು ವಾಹನ ಇನ್‌ಸ್ಪೆಕ್ಟರ್‌ರವರ ಗ್ರೇಡಿನಲ್ಲಿ ಇಡಲು ಕಾರಣಗಳೇನು;

ಆ) ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರನ್ನು ಮೋಟಾರು ವಾಹನ ಇನ್‌ಸ್ಪೆಕ್ಟರ್ ಗ್ರೇಡ್‌ನಲ್ಲಿ ಇಟ್ಟದ್ದು ಸದರಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರ್‌ರವರಿಗೆ ಸಾರಿಗೆ ಅಧಿಕಾರಿ ಹುದ್ದೆಗೆ ಇರುವ ಮೂಲ ವಿದ್ಯಾರ್ಹತೆಗಿಂತ ಹೆಚ್ಚಿದ್ದರು ಕೂಡ ಅವರಿಗೆ ಸಾರಿಗೆ ಅಧಿಕಾರಿ ಹುದ್ದೆಗೆ ಮುಂಬಡ್ತಿಯಾಗಲು ನಾಲ್ಕು ಹಂತಗಳೇಕೆ, ಮತ್ತು ಮೋಟಾರು ವಾಹನ ಇನ್‌ಸ್ಪೆಕ್ಟರ್‌ರವರಿಗೆ ಸಾರಿಗೆ ಅಧಿಕಾರಿಯಾಗುವ ಮೂಲ ವಿದ್ಯಾರ್ಹತೆ ಇಲ್ಲದಿದ್ದರೂ ಅವರಿಗೆ ಮುಂಬಡ್ತಿಯಾಗಲು ಎರಡೇ ಹಂತಗಳೇಕೆ;

ಇ) ಈ ಅವ್ಯವಸ್ಥೆಯನ್ನು ಸರ್ಕಾರದವರು ಇನ್ನಾದರೂ ಸರಿಪಡಿಸುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—(ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು)—

ಅ) ಮೋಟಾರು ವಾಹನ ಇಲಾಖೆಯಲ್ಲಿರುವ ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳ ಕಾರ್ಯವನ್ನು ಪರಿಶೀಲಿಸಿದ ನಾರಾಯಣ ಪೈ ಆಯೋಗವು ಮತ್ತು ಅಧಿಕೃತ ವೇತನ ಆಯೋಗವು ಕಾನೂನು ಪದವಿ ಯನ್ನು ಹೊಂದಿರುವ ಪ್ರಾಸಿಕ್ಯೂಟಿಂಗ್ ತನಿಖಾಧಿಕಾರಿಗಳನ್ನು ಪ್ರಾಸಿಕ್ಯೂಟಿಂಗ್ ನಿರ್ದೇಶನಾಲಯಕ್ಕೆ ವರ್ಗಾವಣೆ ಮಾಡಲು ಮತ್ತು ಕೆಲವರನ್ನು ಇಲಾಖೆಯಲ್ಲೇ ಉಳಿಸಿಕೊಳ್ಳಲು ಸಲಹೆ ನೀಡಿದೆ ಹಾಗೂ ಪ್ರಾಸಿಕ್ಯೂಷನ್ ನಿರ್ದೇಶನಾಲಯದಿಂದ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನಿಯೋಜಿಸಿ